ದೊಡ್ಡ ಬೆಕ್ಕುಗಳು


ಎಲ್ಲಕ್ಕಿಂತ ದೊಡ್ಡ ಬೆಕ್ಕು ಎಲ್ಲಿ ಇದೆ ?
ಸಿಂಹ-ಹುಲಿಗಳು ಗುರುಗಾಡುತ್ತವೆಯೇ?
ಮನೆಗಳಲ್ಲಿರುವ ಬೆಕ್ಕು ಮತ್ತು
ಅಡವಿಯಲ್ಲಿರುವ
ಈ ದೊಡ್ಡ ಬೆಕ್ಕುಗಳ ಹೋಲಿಕೆ ಹೇಗಿದೆ?
ನೀವು ವ್ಯಾಘ್ರಮಾನವ ಎಂಬ ಹೆಸರು
ಕೇಳಿದ್ದಿರಾ?

ಇದೆಲ್ಲವನ್ನು ನೀವು ಈ ಸುಲಭವಾಗಿ
ಓದಲು ಬರುವ ಪುಸ್ತಕದಿಂದ
ತಿಳಿದುಕೊಳ್ಳಬಹುದು.



ದೊಡ್ಡ 'ಬೆಕ್ಕು'ಗಳು

ಜಾಯಸ್ ಮಿಲ್ಟನ್
ಚಿತ್ರ: ಸಿಲ್ವಿಯಾ ಡುರಾನ್







ದೊಡ್ಡ ‘ಬೆಕ್ಕು’ಗಳು

ಜಾಯಸ್ ಮಿಲ್ಟನ್
ಚಿತ್ರಃ ಸಿಲ್ವಿಯಾ ಡುರಾನ್


ಕನ್ನಡಕ್ಕೆ ಪ್ರಭಾಕರ ನಾನಾವಟಿ





ಆಫ್ರಿಕೆಯ ಮಧ್ಯಾನ್ಹದ ಸೂರ್ಯನ ಬಿಸಿಲು
ಉರಿಕೆಂಡದಂತೆ.
ಮುಳ್ಳುಗಳಿರುವ ಜಾಲಿ ಗಿಡ ಸ್ವಲ್ಪವಾದರೂ ತಂಪು.
ಚಿರತೆಗಳಿಗೆ ಒಂದು ಜಂಪು ನಿದ್ದೆಗೆ ಅದು ಅನುಕೂಲ.
ಆದರೆ ಚಿರತೆ ಬಹುಕಾಲ ನಿದ್ರಿಸಲು ಅಶಕ್ಯ.


ಚಿರತೆಗೆ ಸಾಕಷ್ಟು ಹಸಿವು.
ಅದಕ್ಕೆ ದೂರದಲ್ಲಿ ಮೇಯತ್ತಿರುವ
ಜೀಬ್ರಾಗಳ ಹಿಂಡು ಕಂಡಿತು.
ಜೀಬ್ರಾಗಳಿಗೆ ಸಮೀಪದಲ್ಲಿ ಚಿರತೆ ಇರುವದು
ಗೊತ್ತಿರಲಿಲ್ಲ.
ಚಿರತೆಯ ಮೈಮೇಲಿನ ಕಪ್ಪು
ಬೊಟ್ಟೆಗಳಿಂದಾಗಿ ಹಿಂಡಿಗೆ ಅದು ಕಾಣಲಿಲ್ಲ.





ಈಗ ಅದು ಮೆಲ್ಲನೆ ತಲೆ ಎತ್ತರ ಬೆಳೆದ
ಹುಲ್ಲಿನಲ್ಲಿಂದ ಮುಂದೆ ಮುಂದೆ ಸರಿಯುತ್ತದೆ.
ಜೀಬ್ರಾಗಳು ಹವೆಯಲ್ಲಿಯ ಬದಲಾದ
ವಾಸನೆಯಿಂದಲೇ ಸಮೀಪದಲ್ಲಿಯೇ ಏನೋ
ಅಪಾಯವಿದೆ! ಎಂಬುದನ್ನು ಗುರುತಿಸಿವೆ.
ಎಲ್ಲ ಜೀಬ್ರಾಗಳು ಓಡಿ ಹೋಗುತ್ತವೆ.

ಆದರೆ ಒಂದು ಮರಿಜೀಬ್ರಾಕ್ಕೆ ಓಡಿ
ಹೋಗಲು ಸ್ವಲ್ಪ ತಡವಾಗುತ್ತದೆ.





ಚಿರತೆ ಆ ಮರಿಯನ್ನು ಬಾಯಿಯಿಂದ
ಜಗ್ಗುತ್ತ ಗಿಡದ ಮೇಲೆ
ತೆಗೆದುಕೊಂಡು ಹೋಯಿತು.
ಅದನ್ನು ಚಿರತೆ ತಿನ್ನುವದು.

ಚಿರತೆ ಮಾಂಸ ಭಕ್ಷಕ.
ಜೀವಂತವಾಗಿರಲು ಅದು ಬೇಟೆಯಾಡಲೇಬೇಕು.
ಉಳಿದೆಲ್ಲ ಮಾರ್ಜಾಲ ವರ್ಗದ ಪ್ರಾಣಿಯಂತೆ
ಚಿರತೆಗಳ ಶರೀರದ ರಚನೆ ಬೇಟೆಯಾಡಲು
ಅನುಕೂಲ.
ಅವುಗಳಿಗೆ ಬೇಟೆಯನ್ನು ಹರಿದು ತಿನ್ನಲು
ಚೂಪಾದ ಹಲ್ಲುಗಳು ಇರುತ್ತವೆ.


ಅದಕ್ಕೆ ಉದ್ದವಾದ ಕೊಂಡಿಯಂತಹ
ಚೂಪಾದ ಉಗುರುಗಳಿರುತ್ತವೆ.
ಬೇಟೆಯಾಡುವಾಗ ಅದು ತನ್ನ ಬೆರಳಿನ
ಉಗುರುಗಳನ್ನು ಹೊರ ತೆಗೆದು
ಬೇಟೆಯನ್ನು ಬಿಗಿಯಾಗಿ ಹಿಡಿಯುತ್ತದೆ.
ಆ ಮೇಲೆ ಉಗುರುಗಳನ್ನು ಮುಚ್ಚಿಡುತ್ತದೆ.






ಈ ದೊಡ್ಡ ಬೆಕ್ಕು ವೇಗದಿಂದ ಓಡಬಹುದು.
ಆದರೆ ಅದು ಬಹು ಬೇಗ ದಣಿಯುತ್ತದೆ.
ಸಾಕಷ್ಟು ಸಲ ಅದು ಬೇಟೆಯ ಪ್ರಾಣಿಗಳ ಮೇಲೆ ಕಣ್ಣಿಟ್ಟು
ಕದ್ದು ನೋಡುತ್ತಿರುತ್ತದೆ.
ಆ ಮೇಲೆ ಅದು ರಭಸದಿಂದ ಪ್ರಾಣಿಯ ಮೇಲೆ ಎರಗುತ್ತದೆ.

ರಾತ್ರಿಯಲ್ಲಿ ಚಿರತೆಗೆ
ಪ್ರಾಣಿಗಳನ್ನು ಅಂಜಿಸದೆ, ಅಳುಕಿಸದೆ
ಅವುಗಳ ಅತೀ ಸಮೀಪಕ್ಕೆ ಹೋಗುವದು
ಶಕ್ಯವಾಗುತ್ತದೆ.





ಚಿರತೆ ದಿನವಿಡಿ ಮಲಗುವದು.
ಸಂಜೆಯಾದ ಮೇಲೆ ಅದು ಬೇಟೆಗಾಗಿ
ಹೊರಬೀಳುವದು.
ಚಿರತೆಗಳಿಗೆ ರಾತ್ರಿಯ ಕತ್ತಲಲ್ಲಿ
ಮನುಷ್ಯರಿಗಿಂತ ನಿಚ್ಚಳವಾಗಿ ಕಾಣುತ್ತದೆ.

ಚಿರತೆಗಳು ದೊಡ್ಡ ಕಾಯದ ಬೆಕ್ಕುಗಳ ಹಾಗೆ. ಹುಲಿಗಳು ಕೂಡ ಮಾರ್ಜಾಲ ವರ್ಗಕ್ಕೆ ಸೇರಿದ ಪ್ರಾಣಿಗಳು. ಇದೇ ರೀತಿ ಸಿಂಹಗಳು, ಜಾಗುವಾರಗಳು **(jaguars)** ಚೀತೆಗಳು ಮತ್ತು ಕೂಗರಗಳು **(cougars and cheetahs)** ಕೂಡ ಇದೇ ಬಳಗಕ್ಕೆ ಸೇರಿದ ಪ್ರಾಣಿಗಳು.


ಮನೆಯಲ್ಲಿ ಸಾಕಿದ ಬೆಕ್ಕಿನ ತೂಕ 4-5 ಕೇಜಿ ಇರುತ್ತದೆ.ಆದರೆ ಈ ದೊಡ್ಡ ಬೆಕ್ಕಿನ ತೂಕ 50 ಕೇಜಿಯಷ್ಟಿರುತ್ತದೆ.
ಈ ದೊಡ್ಡ ಬೆಕ್ಕುಗಳು ಜಗತ್ತಿನಲ್ಲಿ ಎಲ್ಲೆಲ್ಲಿ ಇವೆ ಎಂಬುದನ್ನು ಈ ನಕಾಶೆಯಲ್ಲಿ ತೋರಿಸಿದೆ.



ಜಗತ್ತಿನಲ್ಲಿಯೇ ಎಲ್ಲಕ್ಕಿಂತ
ದೊಡ್ಡ ಬೆಕ್ಕುಗಳೆಂದರೆ ಹುಲಿಗಳು.
ಗಂಡು ಹುಲಿಯ ತೂಕ 300
ಕೇಜಿಯಷ್ಟಿರಬಹುದು.




ಕೆಲ ಹುಲಿಗಳ ಉದ್ದವು 2 ಮೀಟರಿಗಿಂತ
ಹೆಚ್ಚಿರಬಹುದು.
ಇದರಲ್ಲಿ ಬಾಲದ ಉದ್ದನ್ನು ಹಿಡಿದಿಲ್ಲ!
ಹುಲಿಗಳು ಅಡವಿಗಳಲ್ಲಿ ವಾಸಿಸುತ್ತವೆ.
ಪ್ರತಿಯೊಂದು ಹುಲಿಗೆ ತನ್ನದೇ ಆದ
ಬೇಟೆಯಾಡುವ ಪ್ರದೇಶವಿರುತ್ತದೆ.




ಹುಲಿ ಅಡಗುವದರಲ್ಲಿ ಪಳಗಿದ ಪ್ರಾಣಿ.
ಅದು ನಿಮ್ಮ ತುಂಬಾ ಸಮೀಪದಲ್ಲಿದ್ದರೂ
ನಿಮಗೆ ತಿಳಿಯಲಾರದು.
ನೀವು ಅದರ ಬೇಟೆಯಾಡುವ
ಪ್ರದೇಶದಲ್ಲಿದ್ದರೆ
ನಿಮಗೆ ಅದು ಅಲ್ಲಿ ಇದ್ದದ್ದು ಹೇಗೆ
ತಿಳಿಯಬಹುದು?


.



ಗಿಡಗಳ ಮೇಲಿನ ಅದರ ಉಗುರುಗಳ
ಗುರುತಿನಿಂದಲೇ ಅದರ ಅಸ್ತಿತ್ವ ನಿಮಗೆ
ತಿಳಿಯುವದು.
ಹುಲಿಯ ಉಗುರುಗಳ ಗುರುತಿನಿಂದಲೇ
ಉಳಿದ ಹುಲಿಗಳು ಅದರಿಂದ ದೂರ
ಹೋಗುತ್ತವೆ



ಹುಲಿಗಳ ಬಗ್ಗೆ ವಿಚಿತ್ರವೆನ್ನಿಸುವ ಮತ್ತು ಅಂಜಿಕೆ ಉಂಟು ಮಾಡಿಸುವ ಸಾಕಷ್ಟು ದಂತಕತೆಗಳಿವೆ.
ಕೆಲ ಕತೆಗಳಲ್ಲಿ ಹುಲಿಗಳು ವ್ಯಾಘ್ರಮಾನವರಾಗಿ ಪರಿವರ್ತನೆಗೊಂಡದ್ದನ್ನು ಬಣ್ಣಿಸಿದ್ದ ವಿವರಗಳಿವೆ.
ಈ ವ್ಯಾಘ್ರಮಾನವ ಪ್ರಾಣಿಗಳು ರಾತ್ರಿಯಲ್ಲಿ ಅಡವಿಯಲ್ಲಿ ಅಲೆದಾಡುತ್ತವೆ. ಮನುಷ್ಯರ ಬೇಟೆಯಾಡಿ ತಿನ್ನಲು ಪ್ರಯತ್ನಿಸುವವು ಎಂದು ಬಣ್ಣಿಸಿದ ಕತೆಗಳಿವೆ.
ವ್ಯಾಘ್ರಪ್ರಾಣಿ ಇರುವದು ತುಂಬ ಸುಳ್ಳು. ಆದರೆ ಕೆಲ ಹುಲಿಗಳು ಮನುಷ್ಯರ ಬೇಟೆಯಾಡುವದು ನಿಜ.
ಹುಲಿಗಳು ತಮ್ಮ ವೃದ್ಧಾವಸ್ಥೆಯಲ್ಲಿ ಅಡವಿಯಲ್ಲಿಯ ಪ್ರಾಣಿಗಳ ಬೇಟೆಯಾಡಲು ಆಲಸ್ಯ ಪಡುತ್ತವೆ. ಗಟ್ಟಿ ಇರುವ ಹುಲಿಗಳು ಎಂದಿಗೂ ಮನುಷ್ಯರ ಗೋಜಿಗೆ ಹೋಗಲಾರವು.



ಚಿರತೆ-ಹುಲಿಗಳು ಹಿಂಡಾಗಿ ವಾಸಿಸದೆ
ಒಂಟಿಗರಾಗಿ ಜೀವಿಸುತ್ತವೆ.
ಬೇಟೆಯಾಡುವದು ಕೂಡ
ಒಬ್ಬಂಟಿಗರಾಗಿಯೇ!




ಆದರೆ ಸಿಂಹಗಳು ಮಾತ್ರ ಸಂಗಡಿಗರ
ಜತೆ ಇರುತ್ತವೆ.
ಅವು ಗುಂಪು ಗುಂಪಾಗಿಯೇ
ಬೇಟೆಯಾಡುತ್ತವೆ.



ಗಂಡು ಸಿಂಹದ ಕೊರಳಿನ ಸುತ್ತ ದಟ್ಟವಾದ
ಆಯಾಲುಗಳಿವೆ.
ಈ ಆಯಾಲು ನೋಡಿಯೇ ಉಳಿದ ಎಲ್ಲ
ಪ್ರಾಣಿಗಳು ಗಂಡು ಸಿಂಹದಿಂದ
ದೂರವಿರಲು ಪ್ರಯತ್ನಿಸುತ್ತವೆ!
ಹೆಣ್ಣು ಸಿಂಹವೇ ಸಾಕಷ್ಟು ಸಲ
ಬೇಟೆಯಾಡುತ್ತದೆ.
ಗಂಡು ಸಿಂಹ ತನ್ನ ಗುಂಪಿನ ರಕ್ಷಣೆ
ಮಾಡುತ್ತ ಇರುತ್ತದೆ.
ಅದು ಅವುಗಳ ಮೇಲೆ ದಾಳಿ ಇಡುವ
ಸಿಂಹಗಳ ಜತೆ ಹೋರಾಡುತ್ತದೆ.
ಅದು ತನ್ನ ಗರ್ಜನೆಯಿಂದಲೇ ಅಂಜಿಸಿ
ಅದನ್ನು ಓಡಿಸುತ್ತದೆ.
ಅದರ ಗರ್ಜನೆಯಲ್ಲಿ "ನಾನು ಇಲ್ಲಿ ಇದ್ದೇನೆ.
ಇದು ನನ್ನ ನಿವಾಸ!"
ಎಂದು ಹೇಳಬಯಸುತ್ತದೆ.


ಸಿಂಹಗಳು ಆದಷ್ಟು ದಿನಗಳನ್ನು ಹಾಯಾಗಿ ಜೀವಿಸಲು ಪ್ರಯತ್ನಿಸುತ್ತವೆ.
ವಯಸ್ಸಾದ ಸಿಂಹಗಳು ತೂಕಡಿಸುತ್ತ ದಿನ ಕಳೆಯುತ್ತವೆ.
ಚಿಕ್ಕ ಮರಿಗಳು ತಮ್ಮ ತಮ್ಮೊಳಗೆ ಜಗಳಾಡುತ್ತ ದಿನ ಕಳೆಯುತ್ತವೆ.
ಆದರೆ ಸಿಂಹಗಳ ಜೀವನ ಅಷ್ಟೊಂದು ಸುಲಭವಾಗಿಲ್ಲ.

ವರುಷದಲ್ಲಿಯ ಎಷ್ಟೋ ದಿನ ಅಡವಿ ಬರಡಾಗಿರುತ್ತದೆ.ಆಗ ಅವುಗಳಿಗೆ ಕುಡಿಯಲು ನೀರು ಕೂಡ ದೊರೆಯುವದಿಲ್ಲ.
ಬೇಟೆಯಾಡಲು ಪ್ರಾಣಿಗಳು ದೊರೆಯುವದಿಲ್ಲ.
ಎಷ್ಟೋ ಮರಿಗಳಿಗೆ ತಿನ್ನಲು ಏನೂ ಸಿಗದೆ ಬರಳಬೇಕಾಗುವದು.
ಸಶಕ್ತ ಸಿಂಹಗಳು ಮಾತ್ರ ಇಂತಹ ಸ್ಥಿತಿಯಲ್ಲಿ ಬದುಕಿ ಉಳಿಯುವವು.



ಈ ಬಳಗದ ಎಷ್ಟೋ ಪ್ರಾಣಿಗಳು ನೀರಲ್ಲಿ
ಇಳಿಯಲು ಅಳುಕುವವು.
ಆದರೆ ಜಾಗುವಾರ್ ಮಾತ್ರ ನೀರಲ್ಲಿ ಇಳಿಯಲು
ಅಂಜುವದಿಲ್ಲ.
ಅದು ನಿಪುಣ ಈಜುಗಾರ. ಅದು ಮೀನುಗಳನ್ನು
ಕೂಡ ಹಿಡಿಯಬಹುದು. ದಂಡೆಯಲ್ಲಿ ನಿಂತು
ಈಜಾಡುವ ಮೀನುಗಳು ಕಂಡ ಕೂಡಲೆ
ಪಕ್ಕನೆ ಅದು ಹಿಡಿಯುವದು.


ಸ್ನ್ಯಾಕ್!
ಜಾಗುವಾರ್ ತನ್ನ ಕಾಲಿನ ಪಂಜದಿಂದ
ಮೀನನ್ನು ಹಿಡಿಯವದು.
ಇಂದು ಅದಕ್ಕೆ ಮೀನಿನ ಊಟ.



ಜಾಗುವಾರ್
ಚಿರತೆಯಂತೆ
ಕಾಣುತ್ತದೆ.
ಆದರೆ ಅದರ
ಮೈಮೇಲಿನ
ಬೊಟ್ಟುಗಳು
ಬೇರೆ ರೀತಿಯವು.

ಚಿರತೆ


ಜಾಗುವಾರ್,



ಅಮೇರಿಕೆಯಲ್ಲಿ ಸಿಂಹ ಮತ್ತು
ಹುಲಿಗಳಿಲ್ಲ.
ಆದರೆ ಕೂಗರ್ ಇವೆ.
ಇಲ್ಲಿ ಕಾಣುವ ಮಾರ್ಜಾಲ ವಂಶದ
ದೊಡ್ಡ ಪ್ರಾಣಿ ಎಂದರೆ ಕೂಗರ್.

ಇದು ಅಮೆರಿಕಕ್ಕೆ ಸ್ಥಳೀಯವಾಗಿರುವ ದೊಡ್ಡ ಬೆಕ್ಕು.ಇದು ಉತ್ತರ, ಮಧ್ಯ ಮತ್ತು ದಕ್ಷಿಣ ಅಮೆರಿಕಾದಲ್ಲಿ ವಾಸಿಸುತ್ತದೆ. ಇದು ಜಿಗಿತದಲ್ಲಿ ಬಹು ಪ್ರವೀಣ.
ಕೂಗರ್ ಮರಿಗಳು ಬಂಡೆಗಲ್ಲಿನಿಂದ ಬಂಡೆಗಲ್ಲಿಗೆ ಜಿಗಿಯುತ್ತಿರುತ್ತವೆ. ಕೂಗರ್ ಇದನ್ನು ಪೂಮಾ ಕಾಂಕಲರ್, ಪೂಮಾ, ಮೌಂಟೇನ್ ಸಿಂಹ, ಕ್ಯಾಟಮೌಂಟ್, ಪ್ಯಾಂಥರ್ ಎಂದೂ ಕರೆಯುತ್ತಾರೆ,

ಕಪ್ಪು ಪ್ಯಾಂಥರ್ (black panther) ಎಂದು ಕರೆಯುತ್ತಿರುವ ಪ್ರಾಣಿ ನಿಜವಾಗಿ ಚಿರತೆಯೇ



ಕೆಲವಾರು ಸಲ ಚಿರತೆಗಳು ಕಪ್ಪು ಚಿರತೆಗೆ ಜನ್ಮ ಕೊಡುತ್ತವೆ.



ಕಪ್ಪು ಚಿರತೆಯ ತುಪ್ಪಳಗಳ ಮೇಲಿನ ಬೊಟ್ಟುಗಳನ್ನು ನೋಡಿ ಅದನ್ನು ಗುರುತಿಸಬಹುದು.
ಕಪ್ಪು ಬಣ್ಣ ಒಂದಿಷ್ಟು ಮಸಕಾಗಿದ್ದದ್ದನ್ನು ನೀವು ಗಮನಿಸಬಹುದು.

ಚೀತಾ ಕೂಡ ಮೈಮೇಲೆ ಬೊಟ್ಟುಗಳಿದ್ದ
ಮಾರ್ಜಾಲ ವಂಶದ ಪ್ರಾಣಿ.
ಜಾಗುವಾರ್ ಮತ್ತು ಚಿರತೆಗಳಿಗಿಂತ
ಬೇರೆ ತೆರ ಕಾಣುವ ಈ ಪ್ರಾಣಿ.
ಇದರ ಮೈ ತೆಳ್ಳಗೆ ಇದ್ದು ಕಾಲುಗಳು
ಸಾಕಷ್ಟು ಉದ್ದವಾಗಿರುತ್ತವೆ.



ಜಗತ್ತಿನಲ್ಲಿ ಇರುವ ಎಲ್ಲ ಪ್ರಾಣಿಗಳೊಳಗೆ
ಅತ್ಯಂತ ವೇಗವಾಗಿ ಓಡುವ ಪ್ರಾಣಿ
ಎಂದರೆ ಚೀತಾ.
ಕಾರುಗಳ ವೇಗದಂತೆ ಅದು ಪ್ರತಿ ಗಂಟೆ
100 ಕಿಮೀ ಕೂಡ ಓಡಬಹುದು.





ನೂರಾರು ವರುಷಗಳ ಹಿಂದೆ
ಭಾರತದಲ್ಲಿಯ ಅರಸರು
ಚೇತಾಗಳನ್ನು ಸಾಕು ಮಾಡಿ
ಬೇಟೆಯಾಡಲು
ಉಪಯೋಗಿಸುತ್ತಿದ್ದರು.

ಬೆಕ್ಕಿನ ಬಳಗದ
ಅಡವಿಯಲ್ಲಿಯ ಹಿಂಸ್ರ
ಹುಲಿಯಿಂದ-



ಮನೆಯಲ್ಲಿ ಸಾಕಿದ ಪ್ರಾಣಿಗಳ
ವರೆಗೆ-
ಎಲ್ಲವು ಒಂದಕ್ಕೊಂದು
ಹೋಲುವ ಪ್ರಾಣಿಗಳು.



ಅವುಗಳ ನಾಲಿಗೆ
ಒರಟು.ಸ್ಯಾಂಡಪೇಪರಿನಂತೆ.
ಅವುಗಳ ಹಲ್ಲು ಮತ್ತು
ಉಗುರುಗಳು ಚೂಪು.



ಮನೆಯಲ್ಲಿ ಸಾಕಿದ ಬೆಕ್ಕುಗಳು ಕೂಡ
ಅಡವಿಯಲ್ಲಿಯ ಅವುಗಳ ಬಳಗದಂತೆ
ಉಗುರುಗಳನ್ನು ಪರಚುತ್ತ
ಚೂಪಾಗಿಡುತ್ತವೆ.



ಅವುಗಳಿಗೆ ಬೇಟೆಯಾಡುವದರಲ್ಲಿ ರುಚಿ.
ಎಷ್ಟೋ ಸಲ ಮರಿಗಳು ಗೋಣಿಚೀಲವು
ಜೀವಂತ ಪ್ರಾಣಿ
ಇದ್ದಂತೆ ಅದರ ಮೇಲೆ ಹಾರುತ್ತ, ಜಿಗಿಯುತ್ತ
ಬೇಟೆಯಾಡಲು ಪ್ರಯತ್ನಿಸುತ್ತವೆ.



ದೊಡ್ಡ ಬೆಕ್ಕುಗಳಂತೆ,
ಮನೆಯಲ್ಲಿ ಸಾಕಿದ
ಬೆಕ್ಕುಗಳು ಕೂಡ
ನಾಲಿಗೆಯಿಂದ
ಮೈಯನ್ನು ತಿಕ್ಕಿ
ಅದನ್ನು ಸ್ವಚ್ಛವಿಡುತ್ತವೆ.



ಅವು ಅಲ್ಪನಿದ್ರೆ ಕೂಡ ಮಾಡುತ್ತವೆ.



ಅವುಗಳಿಗೆ ಇಂತರ ನಿದ್ದೆ ಸೇರುತ್ತದೆ



ಮನೆಯಲ್ಲಿಯ ಬೆಕ್ಕುಗಳು
ಖುಶಿಯಲ್ಲಿದ್ದಾಗ ಗುರುಗುಟ್ಟುತ್ತವೆ.
ಹುಲಿಗಳು ಕೂಡ ಗುರುಗುಟ್ಟುತ್ತವೆ.



ಮನೆಯಲ್ಲಿಯ ಬೆಕ್ಕುಗಳು ನಾವು
ಮಾಡಿದ ತಿಂಡಿಗಳನ್ನು ತಿನ್ನುತ್ತವೆ.
ಆದರೆ ಅಡವಿಯಲ್ಲಿ ಬೆಕ್ಕಿನ ಬಳಗದ
ಪ್ರಾಣಿಗಳು ಇಂತಹದನ್ನು
ಮುಟ್ಟಲಿಕ್ಕಿಲ್ಲ.



ಜನರು ಮನೆಬೆಕ್ಕುಗಳ ಆರೈಕೆ
ಮಾಡುತ್ತಾರೆ. ಆದರೆ ಅವು ತಮ್ಮಷ್ಟಕ್ಕೆ
ತಾವೇ ಸ್ವತಂತ್ರವಾಗಿ ಜೀವಿಸಬಹುದು.
ಆದರೆ ಈಗೀಗ ಇದು ಬದಲಾಗುತ್ತಲಿದೆ.

ಸಿಂಹ, ಹುಲಿ ಮತ್ತು ಈ ವಂಶದ
ಪ್ರಾಣಿಗಳಿಗೆ ಜೀವಿಸಲು ದಟ್ಟವಾದ,
ವಿಸ್ತಾರವುಳ್ಳ ಅಡವಿ ಬೇಕು.




ಆದರೆ ಬೆಳೆಯುತ್ತಿರುವ ಜನಸಂಖ್ಯೆಗೆ
ವಾಸಿಸಲು ಜಾಗ ಬೇಕು.
ಹೀಗಾಗಿ ಇಂತಹ ಪ್ರಾಣಿಗಳ ಜಾಗ
ಕಡಿಮೆಯಾಗುತ್ತಲಿದೆ.




ಕೆಲ ದೇಶಗಳು ಇಂತಹ
ಪ್ರಾಣಿಗಳಿಗಾಗಿಯೇ
ಅಡವಿಗಳನ್ನು ಸಂರಕ್ಷಿತವಾಗಿ ಇಟ್ಟಿವೆ.



ಪ್ರವಾಸಿಗಳು ಅಲ್ಲಿ ಹೋಗಿ
ಈ ಪ್ರಾಣಿಗಳನ್ನು ನೋಡಬಹುದು.





ಭವಿಷ್ಯದಲ್ಲಿಯ ನೂರಾರು ವರುಷಗಳ ನಂತರ ಇಂತಹ ಪ್ರಾಣಿಗಳು ಇರಬಹುದೇ? ಇರಬಹುದು.

ಮಾತ್ರ ನಾವೆಲ್ಲ ಅವುಗಳ ಕಾಳಜಿ ತೆಗೆದುಕೊಂಡರೆ ಮಾತ್ರ.